ಅಧ್ಯಕ್ಷರು : ಇಲ್ಲಾ. ತಾವು ಕುಳಿತುಕೊಳ್ಳಿ. ಕೆ.ಜಿ. ಕುಮಾರಸ್ವಾಮಿ ಯವರನ್ನು ಪ್ರಶ್ನೆ ಕೇಳಲು ಕರೆದಿದ್ದೇನೆ. ಕೆ.ಜಿ. ಕುಮಾರಸ್ವಾಮಿಯವರು ಇಲ್ಲವೇ?

ಶ್ರೀ ಪ್ರಕಾಶ್ ಹುಕ್ಕೇರಿ : ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಇಲ್ಲಾ.

ಶ್ರೀ ಪ್ರಕಾಶ್ ಹುಕ್ಕೇರಿ : ಏಕೆ ಕೊಡುವುದಿಲ್ಲ ಎಂಬುದನ್ನು ಹೇಳಬೇಕು.

ಅಧ್ಯಕ್ಷರು : ಈ ಪ್ರಶ್ನೆ ಇರುವುದು ಬಹಳ ಸ್ಪಷ್ಟವಾಗಿ ಅವರ ಕ್ಷೇತ್ರದ ಬಗ್ಗೆ. ನೀವು ಬೇರೆಯದರ ಬಗ್ಗೆ ಕೇಳಿದರೆ ಅವರ ಹತ್ತಿರ ಮಾಹಿತಿ ಹೇಗೆ ಬರುತ್ತದೆ?

ಶ್ರೀ ಪ್ರಕಾಶ್ ಹುಕ್ಕೇರಿ : ತಾವು ದಯಮಾಡಿ ಅವಕಾಶ ಮಾಡಿಕೊಡಬೇಕಾಗುತ್ತದೆ.

ಅಧ್ಯಕ್ಷರು : ತಾವು ಬೇರೆ ರೂಪದಲ್ಲಿ ತನ್ನಿ. ಅವಕಾಶ ಕೊಡುತ್ತೇನೆ. ನೀವು ನಿಮ್ಮ ಕ್ಷೇತ್ರದ 12ನೇ ಹಣಕಾಸಿನ ಯೋಜನೆಯ ಬಗ್ಗೆ ಕೇಳುತ್ತಿದ್ದೀರಿ. ಪ್ರಶ್ನೋತ್ತರದಲ್ಲಿ ನಿಮ್ಮ ಜಿಲ್ಲೆಯ ಬಗ್ಗೆ ಅವರ ಹತ್ತಿರ ಮಾಹಿತಿ ಇರುವುದಿಲ್ಲ.

ಶಿವಮೊಗ್ಗ ಕ್ಷೇತ್ರದಲ್ಲಿರುವ ವಿದ್ಯುತ್ ಘಟಕಗಳ ಬಗ್ಗೆ :

719 ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಇರುವ ಖಾಸಗಿ ವಿದ್ಯುತ್ ಘಟಕಗಳೆಷ್ಟು? ಅವು ಯಾವುವು (ವಿವರಗಳನ್ನು ನೀಡುವುದು)

ಆ) ಈ ಖಾಸಗಿ ವಿದ್ಯುತ್ ಘಟಕಗಳು ಎಷ್ಟು ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುತ್ತಿವೆ; (2007 ರಿಂದ ವಿವರ ನೀಡುವುದು)

ಇ) ಈ ಖಾಸಗಿ ವಿದ್ಯುತ್ ಉತ್ಪಾದನೆ ಘಟಕಗಳಿಗೆ ನೀಡುತ್ತಿರುವ ಮೂಲಭೂತ ಸೌಲಭ್ಯಗಳೇನು: ಈ ಪೈಕಿ ಎಷ್ಟು ಘಟಕಗಳು ನಷ್ಟದಲ್ಲಿವೆ; ಇದಕ್ಕೆ ತಾಂತ್ರಿಕ/ಆಡಳಿತಾತ್ಮಕ ಕಾರಣಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಕೆಳಗಿನಂತೆ ವಿದ್ಯುತ್ ಉತ್ಪಾದಿಸುವ ಯೋಜನೆಗಳನ್ನು ಸ್ಥಾಪಿಸಲು ಸರ್ಕಾರದ ಅನುಮತಿ ನೀಡಲಾಗಿದೆ:

1. ಐದು (5) ಕಂಪನಿಗಳಿಗೆ ಕಿರುಜಲ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಸರ್ಕಾರದಿಂದ ಹಂಚಿಕೆ ಮಾಡಲಾಗಿದೆ. ಅವುಗಳಲ್ಲಿ ಮೂರು (3) ಕಂಪನಿಗಳು ವಿದ್ಯುತ್ ಘಟಕಗಳನ್ನು ಸ್ಥಾಪಿಸಿ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿವೆ. ವಿವರಗಳನ್ನು Annexure-A ದಲ್ಲಿ ನೀಡಲಾಗಿದೆ.
2. ನಾಲ್ಕು (4) ಕಂಪನಿಗಳಿಗೆ ಪವನ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಸರ್ಕಾರದಿಂದ ಹಂಚಿಕೆ ಮಾಡಲಾಗಿದೆ. ಅವುಗಳಲ್ಲಿ ಯಾವುದೇ ಘಟಕವು ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿರುವುದಿಲ್ಲ. ವಿವರಗಳನ್ನು Annexure-A ದಲ್ಲಿ ನೀಡಲಾಗಿದೆ.

ಆ) ಮಂಜೂರಾದ ಐದು (5) ಕಿರುಜಲ ವಿದ್ಯುತ್ ಯೋಜನೆಗಳಲ್ಲಿ ಮೂರು (3) ಕಿರುಜಲ ವಿದ್ಯುತ್ ಯೋಜನೆಗಳು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದು, ಅವುಗಳ ವಿವರಗಳನ್ನು Annexure-A ರಲ್ಲಿ ನೀಡಲಾಗಿದೆ. ಹಂಚಿಕೆ ಮಾಡಿದ ಯಾವುದೇ ಪವನ ವಿದ್ಯುತ್ ಯೋಜನೆಗಳು ಇದುವರೆವಿಗೂ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿರುವುದಿಲ್ಲ.

ಇ) ವಿದ್ಯುತ್ ಉತ್ಪಾದನಾ ಘಟಕಗಳಿಗೆ ಕೆಳಗಿನ ರಿಯಾಯಿತಿ/ಸಹಾಯಧನವನ್ನು ನೀಡಲಾಗುತ್ತಿದೆ :

1. ಪ್ರವೇಶ ತೆರಿಗೆ ವಿನಾಯಿತಿಗೆ ಅವಕಾಶವಿರುತ್ತದೆ.
2. ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದಿಂದ ನವೀಕರಿಸಬಹುದಾದ ಇಂಧನ ವಿದ್ಯುತ್ ಯೋಜನೆಗಳಿಗೆ ಸಹಾಯಧನ ಈ ಕೆಳಗಿನಂತೆ ಲಭ್ಯವಿದೆ.

ಅ. ಪವನ–ಶೇಕಡ 80 ಸವಕಳಿ ಸೌಲಭ್ಯ
ಆ. ಕಿರುಜಲ–ಪ್ರತಿ ಮೆ.ವ್ಯಾ ಗೆ ರೂ.1.5 ಕೋಟಿ ಸಹಾಯಧನ
ಇ. ಜೈವಿಕ–ಪ್ರತಿ ಮೆ.ವ್ಯಾ ಗೆ ರೂ. 20 ಲಕ್ಷ ಸಹಾಯಧನ
ಈ. ಸಹ ಉತ್ಪಾದನೆ

ಸಹಕಾರಿ ಸಕ್ಕರೆ ಕಾರ್ಖಾನೆಗಳು	ಪ್ರತಿ ಮೆ.ವ್ಯಾ ಗೆ ರೂ.40 ಲಕ್ಷ ಸಹಾಯಧನ
ಖಾಸಗಿ ಸಕ್ಕರೆ ಕಾರ್ಖಾನೆಗಳು	ಪ್ರತಿ ಮೆ.ವ್ಯಾ ಗೆ ರೂ.20 ಲಕ್ಷ ಸಹಾಯಧನ

ಈ ಕಂಪನಿಗಳಲ್ಲಿ ಎಷ್ಟು ಘಟಕಗಳು ನಷ್ಟದಲ್ಲಿವೆ ಎಂಬ ಮಾಹಿತಿಯು ಪ್ರಸ್ತುತ ಲಭ್ಯವಿರುವುದಿಲ್ಲ.

ಶ್ರೀ ಕೆ.ಜಿ. ಕುಮಾರಸ್ವಾಮಿ : ಉತ್ತರ ಸಮಾಧಾನಕರವಾಗಿದೆ.

ನಿರಂತರ ಜ್ಯೋತಿ ಯೋಜನೆಯ ಪ್ರಾರಂಭದ ಬಗ್ಗೆ :

343 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿರಂತರ ಜ್ಯೋತಿ ಯೋಜನೆ ರಾಜ್ಯಾದ್ಯಂತ ಪ್ರಾರಂಭಿಸಲಾಗಿದೆಯೇ; ಅವುಗಳಲ್ಲಿ ಜಮಖಂಡಿ ತಾಲ್ಲೂಕು ಸೇರಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಕಾರ್ಯವನ್ನು ಪ್ರಾರಂಭಿಸಲಾಗುವುದು;

ಆ) 25–30 ವರ್ಷಗಳ ಹಿಂದೆ ಹಾಕಲಾಗಿರುವ ವಿದ್ಯುತ್ ತಂತಿ ಬದಲಾಯಿಸುವ (Conducter) ಅಗತ್ಯತೆ ಸರ್ಕಾರಕ್ಕೆ ಮನವರಿಕೆ ಆಗಿದೆಯೇ;

ಇ) ಚಿಕ್ಕಲತಿ ಕ್ರಾಸ್‌ನಲ್ಲಿ ಹೊಸದೊಂದು 220 ಕೆ.ವಿ. ಸ್ಟೇಷನ್ ಮಂಜೂರು ಮಾಡುವ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿಲ್ಲವೆ; ಹಾಗಿದ್ದಲ್ಲಿ, ಎಂದು ಮಂಜೂರು ಮಾಡಲಾಗುವುದು;

ಈ) ಸಾವಳಗಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಸ್ಥಾಪನೆಯ ಅವಶ್ಯಕತೆ ಬಗ್ಗೆ ಸರ್ಕಾರ ಗಮನಹರಿಸುವುದೇ?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ರಾಜ್ಯದಲ್ಲಿ 6 ತಾಲ್ಲೂಕುಗಳಾದ ಮಾಲೂರು, ಮಳವಳ್ಳಿ, ಬೈಲಹೊಂಗಲ, ಶಿಗ್ಗಾಂವ್, ಸವಣೂರು ಮತ್ತು ಕುಷ್ಟಗಿಗಳಲ್ಲಿ "ನಿರಂತರ ಜ್ಯೋತಿ" ಯೋಜನೆಯನ್ನು ಪ್ರಾಯೋಗಿಕವಾಗಿ (ಪೈಲಟ್ ಯೋಜನೆ)